

(6ನೇ ಪುಟದಿಂದ)

## ಪ್ರಯೋಜನಗಳು

- ★ ಗಂಧಕದ ಅಂಶವನ್ನು ಹೊಂದಿರುವ ಈ ಬಳ್ಳಿಯನ್ನು ಬ್ರೆಜಿಲಿಯನ್ನರು ಆಹಾರವಾಗಿಯೇ ಬಳಸುತ್ತಾರಂತೆ.
- ★ ಚಿಗುರಿದ ಎಲೆಗಳನ್ನು ತೆಂಗಿನೆಣ್ಣೆ ಮತ್ತು ಉಪ್ಪಿನ ಮಿಶ್ರಣದಲ್ಲಿ ಕುದಿಸಿ ಮಳೆಗಾಲದಲ್ಲಿ ಕಂಡುಬರುವ ಕಾಲ್ಬೆರಳಿನ ಸಂಧಿ ಕೊರೆತಕ್ಕೆ (ಕಡು ಬೆರಳಿಗೆ) ಲೇಪಿಸಿದರೆ ಗಾಯ ಬೇಗನೇ ವಾಸಿಯಾಗುತ್ತದೆ.
- ★ ಇದರ ಎಲೆಗಳನ್ನು ಶ್ವಾಸಕೋಶ ಸಂಬಂಧಿ ಕಾಯಿಲೆಗೂ, ಸಂಧಿವಾತದ ತೊಂದರೆಗೂ ಬಳಸಲಾಗುತ್ತದೆ.
- ★ ಇತ್ತೀಚಿನ ದಿನಗಳಲ್ಲಿ ಬೆಳ್ಳುಳ್ಳಿ ಬಳ್ಳಿಯ ರಸವನ್ನು ಕ್ಯಾನ್ಸರ್ ಗಡ್ಡೆಗಳನ್ನು ನಿಯಂತ್ರಿಸುವ ಔಷಧವಾಗಿ ಬಳಸಲು ಸಂಶೋಧನೆಗಳು ನಡೆಯುತ್ತಿವೆ.
- ★ ತರಕಾರಿ ಬೆಳೆಗಳಿಗೆ ಕಂಡುಬರುವ ಕೀಟಬಾಧೆಯನ್ನು ಇದರ ಎಲೆಯ ಕಷಾಯ ಸಿಂಪಡಿಸಿ ನಿಯಂತ್ರಿಸಬಹುದು.
- ★ ಮನೆಯಂಗಳದಲ್ಲಿ ಬಳ್ಳಿ ಚೆನ್ನಾಗಿ ಬೆಳೆದಿದ್ದರೆ ಇದನ್ನು ಸೊಪ್ಪಿನ ಗೊಬ್ಬರ ತಯಾರಿಸಲು ಬಳಸಬಹುದು.

